CPMG/KA/BG-GPO/13/2003-05

ಸುವರ್ಣ ಕರ್ನಾಟಕ - 2006

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ - I | ಬೆಂಗಳೂರು, ಗುರುವಾರ, ಆಗಸ್ಟ್ ೧೧, ೨೦೦೫ (ಶ್ರಾವಣ ೨೦, ಶಕ ವರ್ಷ ೧೯೨೭) | ನಂ. ೧೫೭೪ |
|---|---|---|

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮೀಣ ಮೀಸಲಾತಿ ಸೌಲಭ್ಯಕ್ಕಾಗಿ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ನೀಡುವ ಬಗ್ಗೆ.

**ಓದಲಾಗಿದೆ:**(1) ದಿನಾಂಕ 6-1-2001ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 59 ಶಾಸನ 2000.

(2) ದಿನಾಂಕ 30-1-2001ರ ಅಧಿಸೂಚನೆ ಸಂಖ್ಯೆ: ಸಿಆಸುಇ 01 ಸೆನೆನಿ 2000 (ಭಾಗ-3).

(3) ದಿನಾಂಕ 13-2-2001ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 8 ಸೆನೆನಿ 2001.

(4) ದಿನಾಂಕ 14-6-2001ರ ಸುತ್ತೋಲೆ ಸಂಖ್ಯೆ: ಸಿಆಸುಇ 10 ಸೆನೆನಿ 2001.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿ ನಿಯಮ, 2000ನ್ನು (The Karnataka Reservation of Appointments of Posts (In the Civil Services of the State) for Rural Candidates, Act 2000) ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು. ಮೇಲೆ ಓದಲಾದ ಕ್ರಮಾಂಕ (2) ರಲ್ಲಿರುವ ಅಧಿಸೂಚನೆಯಲ್ಲಿ ಮೇಲ್ಕಂಡ ಅಧಿನಿಯಮವನ್ನು ದಿನಾಂಕ 30-1-2001ರಿಂದ ಜಾರಿಗೊಳಿಸಲಾಗಿತ್ತು. ಮೇಲೆ ಓದಲಾದ ಕ್ರಮಾಂಕ (3) ರಲ್ಲಿರುವ ಸರ್ಕಾರಿ ಆದೇಶದಲ್ಲಿ ಮೇಲ್ಕಂಡ ಅಧಿನಿಯಮದ ಸೆಕ್ಷನ್ 5ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಗ್ರಾಮೀಣ ಮೀಸಲಾತಿ ಸೌಲಭ್ಯಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ನಮೂನೆಗಳನ್ನು ಹಾಗೂ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿತ್ತು.

ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ: 4456/2004ರಲ್ಲಿ ದಿನಾಂಕ 22-3-2005ರಂದು ನೀಡಿರುವ ತೀರ್ಪಿನಲ್ಲಿ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ನೀಡುವ ಬಗ್ಗೆ ಈ ಕೆಳಕಂಡಂತೆ ಅವಲೋಕನೆ ಮಾಡಿದೆ:

> "The status of the school and whether it was located in a village or not is to be seen at the time when the respondent studied in the school and not on the date of the receipt of applications. If the school was located in a rural area when the respondent studied he would be eligible as a rural candidate notwithstanding that the village had later been declared a town panchayath. Since the respondent had studied in a rural school he was entitled to be considered against one of the posts reserved for such candidates;"

ಮಾನ್ಯ ಉಚ್ಛ ನ್ಯಾಯಾಲಯದ ಮೇಲ್ಕಂಡ ಆದೇಶದ ಹಿನ್ನೆಲೆಯಲ್ಲಿ ಮೇಲೆ ಕ್ರಮಾಂಕ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಲಾಗಿರುವ ನಮೂನೆ-2ನ್ನು ಮಾರ್ಪಡಿಸುವ ಬಗ್ಗೆ ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ:-

**ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 96 ಸೆನೆನಿ 2005, ಬೆಂಗಳೂರು, ದಿನಾಂಕ:10-08-2005.**

ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000ದ ಸೆಕ್ಷನ್ 5ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಗ್ರಾಮೀಣ ಮೀಸಲಾತಿ ಸೌಲಭ್ಯಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮಾಂಕ (3) ರಲ್ಲಿ ನಿಗದಿಪಡಿಸ ಲಾಗಿದ್ದ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ನಮೂನೆ-1 ಹಾಗೂ ನಮೂನೆ-2 ಮತ್ತು ಕಾರ್ಯ ವಿಧಾನದಲ್ಲಿ, ನಮೂನೆ-2ನ್ನು ರದ್ದುಪಡಿಸಿ, ಅದರ ಸ್ಥಾನದಲ್ಲಿ ಈ ಆದೇಶಕ್ಕೆ ಲಗತ್ತಿಸಿದ ನಮೂನೆ-2ನ್ನು ಪ್ರತಿಷ್ಠಾಪಿಸಲಾಗಿದೆ. ಈ ಬದಲಾವಣೆಯು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತದೆ. ಈ ಬದಲಾವಣೆಯನ್ನು ಹೊರತುಪಡಿಸಿ ಮೇಲೆ ಓದಲಾದ ಕ್ರಮಾಂಕ (3) ರಲ್ಲಿರುವ ಆದೇಶದಲ್ಲಿ ನಿಗದಿಪಡಿಸಿರುವ ಇತರ ನಮೂನೆ ಹಾಗೂ ಕಾರ್ಯ ವಿಧಾನಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲವಾದ್ದರಿಂದ, ಅವುಗಳು ಯಥಾವತ್ತಾಗಿ ಇನ್ನು ಮುಂದೆಯೂ ಜಾರಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಪಿ.ಕೆ. ಬಾಬುರಾವ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

## ನಮೂನೆ-2

ಶ್ರೀ..............................................................................ರವರ ಮಗ:ಮಗಳು:ಪತ್ನಿ ಶ್ರೀ : ಶ್ರೀಮತಿ : ಕುಮಾರಿ ......................................................ಜಿಲ್ಲೆ ...................................... ತಾಲ್ಲೂಕು...................................... ಗ್ರಾಮದಲ್ಲಿ.................................. ವಾಸವಾಗಿರುವ ಇವರು ಒಂದನೇ ತರಗತಿಯಿಂದ ........... ತರಗತಿಯವರೆಗೆ ............. ಜಿಲ್ಲೆ.................. ತಾಲ್ಲೂಕು.............................ಪಟ್ಟಣ..................................ಶಾಲೆಯಲ್ಲಿ ವ್ಯಾಸಂಗ ಮಾಡಿ ........... ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕದ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

(ಸಹಿ)
ಮುಖ್ಯೋಪಾಧ್ಯಾಯ

ಮೇಲುರುಜು
ಕ್ಷೇತ್ರ ಶಿಕ್ಷಣಾಧಿಕಾರಿ.

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.

CPMG / KA / BG. GPO - 13 / 2000

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| | | |
|---|---|---|
| ಭಾಗ-I | ಬೆಂಗಳೂರು, ಶುಕ್ರವಾರ, ಫೆಬ್ರವರಿ ೧೬, ೨೦೦೧ (ಮಾಘ ೨೭, ಶಕ ವರ್ಷ ೧೯೨೨) | ನಂ.೩೫೭ |


ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ನೀಡುವ ಬಗ್ಗೆ.

ಓದಲಾಗಿದೆ: (1) ದಿನಾಂಕ:6-1-2001ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 59 ಶಾಸನ 2000.

(2) ದಿನಾಂಕ: 30-01-2001 ರ ಅಧಿಸೂಚನೆ ಸಂಖ್ಯೆ: ಸಿಆಸುಇ 01 ಸೆನೆನಿ 2000 (ಭಾ-3).

------

1) ಮೇಲೆ ಓದಲಾದ ಕ್ರಮಾಂಕ (1) ರಲ್ಲಿರುವ ಅಧಿಸೂಚನೆಯಲ್ಲಿ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000ನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಮೇಲೆ ಓದಲಾದ ಕ್ರಮಾಂಕ. (2) ರಲ್ಲಿರುವ ಅಧಿಸೂಚನೆಯಲ್ಲಿ ಮೇಲ್ಕಂಡ ಅಧಿನಿಯಮವನ್ನು ದಿನಾಂಕ: 30-1-2001 ರಿಂದ ಜಾರಿಗೊಳಿಸಲಾಗಿದೆ.

(2) ಸದರಿ ಅಧಿನಿಯಮದ ಸೆಕ್ಷನ್ 3ನ್ನು ಈ ಕೆಳಗೆ ಉದ್ಧರಿಸಿದೆ:-

"3. ಗ್ರಾಮೀಣ ಅಭ್ಯರ್ಥಿಗಳಿಗಾಗಿ ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ:- ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ನಗರ ಪ್ರದೇಶದ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಒಬ್ಬ ಗ್ರಾಮೀಣ ಅಭ್ಯರ್ಥಿಯೊಡನೆ ಹೋಲಿಸಿದಲ್ಲಿ, ಅವನು ತೀವ್ರ ಹಿನ್ನೆಡೆಯನ್ನು ಅನುಭವಿಸುತ್ತಿರುವುದನ್ನು ಮತ್ತು ರಾಜ್ಯದ ಸಿವಿಲ್ ಸೇವೆಗಳಲ್ಲಿ ಗ್ರಾಮೀಣ ಅಭ್ಯರ್ಥಿಗಳ ಪ್ರಾತಿನಿಧ್ಯವು ಸಾಕಷ್ಟಿಲ್ಲದಿರುವುದನ್ನು ಗಮನಿಸಿ ಜನರಲ್ ಮೆರಿಟ್ ಹಾಗು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಪ್ರತಿಯೊಂದು ಪ್ರವರ್ಗಗಳಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಲ್ಲಿ ನೇರ ನೇಮಕಾತಿಗಾಗಿ ಕಾಯ್ದಿರಿಸಿದ ಖಾಲಿ ಸ್ಥಾನಗಳ ಶೇಕಡಾ ಇಪತ್ತೈದು ಗ್ರಾಮೀಣ ಅಭ್ಯರ್ಥಿಗಳಿಗಾಗಿ ಮೀಸಲಿಡತಕ್ಕದ್ದು: ಪರಂತು, ಜನರಲ್ ಮೆರಿಟ್‌ಗೆ ಅಥವಾ 1ನೇ ಪ್ರವರ್ಗವನ್ನು ಹೊರತುಪಡಿಸಿದಂತೆ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಗ್ರಾಮೀಣ ಅಭ್ಯರ್ಥಿಗಳ ಸಂದರ್ಭದಲ್ಲಿ, ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಹೊರಡಿಸಲಾದ ಮೀಸಲಾತಿಗೆ ಸಂಬಂಧಿಸಿದ ಸರ್ಕಾರದ ಆದೇಶಗಳ ಪ್ರಕಾರ ಮೇಲುಸ್ತರದ ಪರಿಕಲ್ಪನೆಯು (ಕ್ರೀಮಿ ಲೇಯರ್) ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು."

3. ಸದರಿ ಅಧಿನಿಯಮದಲ್ಲಿ ಗ್ರಾಮೀಣ ಅಭ್ಯರ್ಥಿಯನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ:-

(i) 'ಗ್ರಾಮೀಣ ಅಭ್ಯರ್ಥಿ' ಎಂದರೆ, ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್‌ಎಸ್‌ಎಲ್‌ಸಿ ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ;

(ii) ಒಂದು ಹುದ್ದೆಗೆ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆಯಾಗಿದ್ದಲ್ಲಿ; 1ನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ;

ಕರ್ನಾಟಕ ಪೌರನಿಗಮಗಳ ಅಧಿನಿಯಮ; 1976 ರ ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರಡಿಯಲ್ಲಿ ನಿರ್ಧಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣನಗರ ಪ್ರದೇಶ ಅಥವಾ ಪರಿವರ್ತನೆ ಘಂತದಲ್ಲಿರುವ ಪ್ರದೇಶಗಳ ಹೊರತಾಗಿ ಇತರ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ.

4. ಈ ಹಿನ್ನೆಲೆಯಲ್ಲಿ, ಮೇಲೆ ವಿವರಿಸಿದ ಅಂಶಗಳನ್ನು ಒಳಗೊಂಡ, ಅಂದರೆ, (1) ವ್ಯಾಸಂಗ (study), (2) ಮೀಸಲಾತಿಯ ವರ್ಗ ಮತ್ತು (3) ಮೇಲುಸ್ತರದ ಪರಿಕಲ್ಪನೆ (Creamy Layer Concept) ಈ ಅಂಶಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಯಾರು ನೀಡಬೇಕು ಎಂಬ ಬಗ್ಗೆ ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 08 ಸೆನೆನಿ 2001, ಬೆಂಗಳೂರು, ದಿನಾಂಕ:13-02-2001.

5. ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000 ರ ಸೆಕ್ಷನ್ 5 ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ; ಸದರಿ ಪ್ರಮಾಣ ಪತ್ರವನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯವಿಧಾನವನ್ನು ನಿಗಧಿಪಡಿಸಿದೆ:-

(1) ಸಂಬಂಧಿಸಿದ ಅಭ್ಯರ್ಥಿಯು ಯಾವ ಇತರೆ ಹಿಂದುಳಿದ ವರ್ಗಕ್ಕೆ (Other Backward Class) ಸೇರಿದ್ದಾನೆ (ಅದರಲ್ಲಿ ಅವನು ಮೇಲುಸ್ತರದ ಪರಿಕಲ್ಪನೆ ಯಡಿಯಲ್ಲಿ (Creamy layer concept) ಬರುವುದಿಲ್ಲ ವೆನ್ನುವುದೂ ಒಳಗೊಂಡಿರುತ್ತದೆ) ಎನ್ನುವ ಬಗ್ಗೆ ಸರ್ಕಾರ (ಅಂದರೆ; ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ಸಮಾಜ ಕಲ್ಯಾಣ ಇಲಾಖೆ) ಕರ್ನಾಟಕ ಅನುಸೂಚಿತ ಜಾತಿಗಳು; ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 ರಡಿಯಲ್ಲಿ ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು; (ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ-I ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ (Creamy layer concept) ಅನ್ವಯವಾಗುವುದಿಲ್ಲ). ಅಂದರೆ, ಜನರಲ್ ಮೆರಿಟ್ ಸೇರಿದಂತೆ ಹಿಂದುಳಿದ ವರ್ಗಗಳಾದ ಪ್ರವರ್ಗ-I ಎ, ಪ್ರವರ್ಗ-II ಬಿ, ಪ್ರವರ್ಗ-III ಬಿ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ ಅನ್ವಯವಾಗುತ್ತದೆ.

(2) ಜನರಲ್ ಮೆರಿಟ್ ವರ್ಗಕ್ಕೆ ಸೇರಿದ ಆದರೆ ಮೇಲುಸ್ತರದ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಬಾರದ ಗ್ರಾಮೀಣ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಸೀಲ್ದಾರ್ ರವರಿಂದ ಈ ಆದೇಶಕ್ಕೆ ಲಗತ್ತಿಸಿದ ನಮೂನೆ-1 ರಲ್ಲಿ ಪಡೆಯತಕ್ಕದ್ದು.

(3) ಗ್ರಾಮೀಣ ಮೀಸಲಾತಿ ಸೌಲಭ್ಯ ಕೋರುವ ಎಲ್ಲಾ ಅಭ್ಯರ್ಥಿಗಳು ಅವರ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಈ ಆದೇಶಕ್ಕೆ ಲಗತ್ತಿಸಿದ ನಮೂನೆ-2 ರಲ್ಲಿ ಅಭ್ಯರ್ಥಿಗಳು ಉತ್ತೀರ್ಣರಾದ ಸಂಸ್ಥೆಯ ಪ್ರಿನ್ಸಿಪಾಲರು: ಮುಖ್ಯೋಪಾಧ್ಯಾಯರು: ಮುಖ್ಯೋಪಾಧ್ಯಾಯಿನಿ ಯವರಿಂದ, ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲೆ ಸಹಿಯೊಂದಿಗೆ ಪಡೆಯಬೇಕು. ಈ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ಅಂತಿಮವಾಗಿ ವ್ಯಾಸಂಗ ಮಾಡಿದ ಸಂಸ್ಥೆ ವಿತರಿಸಬೇಕು ಮತ್ತು ಅಭ್ಯರ್ಥಿಗಳು ಹಿಂದೆ ಒಂದಕ್ಕಿಂತ ಹೆಚ್ಚು ಸಂಸ್ಥೆ: ಶಾಲೆಗಳಲ್ಲಿ ಅಭ್ಯಾಸ ಮಾಡಿದ್ದಲ್ಲಿ ಆ ಬಗ್ಗೆ ಆ ಎಲ್ಲಾ ಸಂಸ್ಥೆಗಳಲ್ಲಿ ತಪಾಸಣೆಯಾಗಿರಬೇಕು.

(4) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು 'ಗ್ರಾಮೀಣ ಅಭ್ಯರ್ಥಿ ಮೀಸಲಾತಿಗೆ ಅರ್ಹರಾಗುವ ಅಭ್ಯರ್ಥಿಗಳು' "ಗ್ರಾಮೀಣ ಅಭ್ಯರ್ಥಿ" ಪ್ರಮಾಣ ಪತ್ರವನ್ನು ಸಂಬಂಧಿಸಿದ ಅಧಿಕಾರಿಗಳಿಂದ ಕ್ಷಿಪ್ರವಾಗಿ ಪಡೆಯಲು ಅನುಕೂಲವಾಗುವಂತೆ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಸಹಾಯಕ ಶಿಕ್ಷಣ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಸೂಚಿಸಲಾಗಿದೆ. ಈ ಉದ್ದೇಶಕ್ಕಾಗಿ ಪ್ರಮಾಣ ಪತ್ರಗಳನ್ನು ನೇರವಾಗಿ ಅಭ್ಯರ್ಥಿಗೆ ವಿತರಣೆ ಮಾಡಿ ಮತ್ತು ವಿತರಣೆ ಮಾಡಿದ ಅಂತಹ ಅಭ್ಯರ್ಥಿಗಳ ಪಟ್ಟಿಯನ್ನು ಕ್ಷೇತ್ರ ಶಿಕ್ಷಣ ಅಧಿಕಾರಿಗೆ ಕಳುಹಿಸುವಂತೆ ಹಾಗೂ ಅಭ್ಯರ್ಥಿಗಳ ಪಟ್ಟಿ ಸಂಸ್ಥೆಯಿಂದ ಬಂದಿಲ್ಲವೆಂಬ ಕಾರಣದ ಮೇಲೆ ಮೇಲುರುಜು ಮಾಡುವ ಪ್ರಕ್ರಿಯೆಯಲ್ಲಿ ವಿಳಂಬವಾಗದಂತೆ ಖಾತರಿಪಡಿಸಿಕೊಳ್ಳಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಚಂದ್ರಶೇಖರಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

## ನಮೂನೆ-1

ಜನರಲ್ ಮೇರಿಟ್ ಅಭ್ಯರ್ಥಿಗಳ ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಾಮಾಣಪತ್ರ.

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

ಗೆ,

ತಹಸೀಲ್ದಾರ್,
. . . . . . . . . . . . . . ತಾಲ್ಲೂಕು,
. . . . . . . . . . . . . . . . . ಜಿಲ್ಲೆ.

ಮಾನ್ಯರೆ,

ಶ್ರೀ: ಶ್ರೀಮತಿ: . . . . . . . . . . . . . . . . . . . . . . . . . . . . . . . . . . ಎಂಬುವವರ ಮಗ: ಮಗಳು: ಹೆಂಡತಿ: ಗಂಡ: . . . . . . . . . . . . . . . . . . . . . . . . . . . . . . . ಆದ ನಾನು ಮೇಲುಸ್ತರದಲ್ಲಿ (Creamy layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ. :
2. ಅಭ್ಯರ್ಥಿಯ ಸ್ವಂತ ಸ್ಥಳ : ಗ್ರಾಮ :
   ತಾಲ್ಲೂಕು :
   ಜಿಲ್ಲೆ :
3. ಅಭ್ಯರ್ಥಿಯ ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ :
4. ಅಭ್ಯರ್ಥಿಯ ತಂದೆ: ತಾಯಿ: ಪೋಷಕರ ಹೆಂಡತಿ: ಗಂಡನ ಹೆಸರು ಮತ್ತು ಉದ್ಯೋಗ. :
   (ಉದ್ಯೋಗವು ಸರ್ಕಾರಿ: ಅರೆಸರ್ಕಾರಿ: ಸಾರ್ವಜನಿಕ ಉದ್ದಿಮೆ: ಖಾಸಗಿ)
5. ಅಭ್ಯರ್ಥಿಯ ಪ್ರಸ್ತುತ ಅಂಚೆ ವಿಳಾಸ (ಸ್ಪಷ್ಟವಾಗಿ ನಮೂದಿಸುವುದು) :
6. ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ :
7. ಅಭ್ಯರ್ಥಿಯ ಪ್ರಾಥಮಿಕ: ಮಾಧ್ಯಮಿಕ: ಹಾಗೂ ಪ್ರೌಢಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು. :
8. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ: ತಾಯಿ: ಪೋಷಕರು (ತಂದೆ: ತಾಯಿ ಜೀವಂತವಾಗಿರದಿದ್ದಲ್ಲಿ) ಹೆಂಡತಿ: ಗಂಡ ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ. :
   (1) ವೇತನ (ವೇತನ ಶ್ರೇಣಿ) :
   (2) ಜಮೀನಿನ ವಿವರಗಳು :
   (3) ಇತರೇ ಮೂಲಗಳಿಂದ :
9. ಆದಾಯ ತೆರಿಗೆ ಪಾವತಿದಾರರೇ? :
10. ಸಂಪತ್ತು ತೆರಿಗೆ ಪಾವತಿದಾರರೇ? :
11. ಮಾರಾಟ ತೆರಿಗೆ ಪಾವತಿದಾರರೇ? :

### ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಲಾದ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಸ್ಥಳ :

ದಿನಾಂಕ :

ತಮ್ಮ ವಿಧೇಯ
(ಅಭ್ಯರ್ಥಿಯ ಸಹಿ).

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ: ತಾಯಿ: ಪೋಷಕರು
(ತಂದೆ: ತಾಯಿ: ಜೀವಂತವಾಗಿರದಿದ್ದಲ್ಲಿ)
(ಹೆಂಡತಿ: ಗಂಡ ಇವರ ಸಹಿ)

ಇಬ್ಬರು ಸ್ಥಳೀಯ ಸಾಕ್ಷಿಗಳು

ಅಭ್ಯರ್ಥಿಯ ಮತ್ತು ತಂದೆ: ತಾಯಿ: ಪೋಷಕರು: ಗಂಡ: ಹೆಂಡತಿ ಇವರನ್ನು ಹಾಗೂ ಇವರ ಸಹಿಯನ್ನು ನಾವು ಗುರುತಿಸುತ್ತೇವೆ:

ಸಾಕ್ಷಿಗಳ ಸಹಿ : 1.

(ಪೂರ್ಣ ವಿಳಾಸದೊಂದಿಗೆ) : 2.

ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ :ಶ್ರೀಮತಿ: . . . . . . . . . . . . . . . . . . . . . . . . . . . . . . . . . . . . . . . ಇವರ ಮಗ: ಮಗಳು: ಹೆಂಡತಿ: ಗಂಡ: ಶ್ರೀ: ಶ್ರೀಮತಿ: ಕುಮಾರಿ: . . . . . . . . . . . . . . . . . . . . . . . . . ಎಂಬುವವರು ಕರ್ನಾಟಕ ರಾಜ್ಯದ . . . . . . . . . . . . . . . . ಜಿಲ್ಲೆಯ ವಿಭಾಗ: . . . . . . . . . . . . . . . . . . . . . . . . ಗ್ರಾಮ: ಪಟ್ಟಣ: ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆಂದು ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ: ಶ್ರೀಮತಿ: ಕುಮಾರಿ: . . . . . . . . . . . . . . . . . . . . . . . . . . . . . . ಇವರ ತಂದೆ: ತಾಯಿ: ಪೋಷಕರು ಇವರು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ: 31-1-1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ಥರದಲ್ಲಿ (Creamy layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ: ತಹಸೀಲ್ದಾರ್,

ದಿನಾಂಕ: . . . . . . . . . . . . . . . . . . . . . . ತಾಲ್ಲೂಕು.

ಸೂಚನೆ-1

ಇದರಲ್ಲಿ ಉಪಯೋಗಿಸಲಾಗಿರುವ 'ಸಾಮಾನ್ಯ ನಿವಾಸಿ' ಎಂಬ ಪದವಿ 1950 ರ ಜನತಾ ಪ್ರಾತಿನಿಧ್ಯ ಕಾಯಿದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.

ಸೂಚನೆ-2

ಪರಿಶೀಲನಾ ಪ್ರಾಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಖ್ಯೆ: ಎಸ್‌ಡಬ್ಲ್ಯೂಡಿ 251 ಬಿಸಿಎ, 95, ಬೆಂಗಳೂರು, ದಿನಾಂಕ: 31-1-1995 ರನ್ವಯ ಮೇಲುಸ್ಥರ (Creamy layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕುದು.

ನಮೂನೆ-2

ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ : . . . . . . . . . . . . . . . . . . . . . . . . . . . . . . . . . . . . . . . . . . ರವರ ಮಗ: ಮಗಳು: ಪತ್ನಿ ಶ್ರೀ: ಶ್ರೀಮತಿ: ಕುಮಾರಿ: . . . . . . . . . . . . . . . . . . . . . . . . . . . . . . ಜಿಲ್ಲೆ . . . . . . . . . . . . . . . . . . . . . . . . . . . . ತಾಲ್ಲೂಕು: . . . . . . . . . . . . . . . . . . . . . . ಗ್ರಾಮದಲ್ಲಿ . . . . . . . . . . . . . . . . . . . . ವಾಸವಾಗಿರುವ ಇವರು ಒಂದನೇ ತರಗತಿಯಿಂದ . . . . . . . . . . . . . . . . . . . . ತರಗತಿಯವರೆಗೆ . . . . . . . . . . . . . . . . . ಜಿಲ್ಲೆ . . . . . . . . . . . . ತಾಲ್ಲೂಕು: . . . . . . . . . . . . . . . . . . . . . . ಪಟ್ಟಣ . . . . . . . . . . . . . . . . . . . . . ಶಾಲೆಯಲ್ಲಿ ವ್ಯಾಸಂಗ ಮಾಡಿ . . . . . . . . . . . . . . . . ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯ ಕರ್ನಾಟಕದ ಪೌರ-ನಿಗಮಗಳು ಅಧಿನಿಯಮ, 1976 ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಅಡಿಯಲ್ಲಿ ನಿರ್ಧಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿದೆ.

(ಸಹಿ)
ಮುಖ್ಯೋಪಾಧ್ಯಾಯರು.

ಮೇಲುರುಜು
ಕ್ಷೇತ್ರ ಶಿಕ್ಷಣ ಅಧಿಕಾರಿ.

Printed by : The Director of Printing, Stationery and Publications, Government Press, Bangalore - 1.